ಫ್ಯಾಷನ್

# ಫಳಫಳ ಹೊಳೆವ ಪೈಠಣಿ ಸೀರೆ

ಸೀರೆಗಳ ಮಟ್ಟಿಗೆ ಪೈಠಣಿ ಸೀರೆ ಈಗೀಗ ಹೆಣ್ಣುಮಕ್ಕಳ ಮೆಚ್ಚಿನ ಸೀರೆಯಾಗುತ್ತಿದೆ. ಮನೆಯ ಕಪಾಟಿನಲ್ಲಿ ಎಷ್ಟೇ ಸೀರೆಗಳಿದ್ದರೂ ಜರಿಯಂಚಿನ ಪೈಠಣಿ ಸೀರೆ ಕಂಡರೆ ಮಹಿಳೆಯರ ಕಣ್ಣುಗಳರಳುತ್ತವೆ.

■ ಪವಿತ್ರಾ ರಾಘವೇಂದ್ರ ಶೆಟ್ಟಿ





ಸೀರೆ ಎಂದಾಕ್ಷಣ ಹೆಣ್ಣು ಮಕ್ಕಳ ಕಣ್ಣು ಅರಳುವುದು ಸಹಜ. ಅಮ್ಮ ಕೊಟ್ಟ ಸೀರೆ, ಅಮ್ಮ ಉಟ್ಟ ಸೀರೆ, ಧಾರೆ ಸೀರೆ, ಮೊದಲ ಸಂಬಳದಲ್ಲಿ ತೆಗೆದುಕೊಂಡ ಸೀರೆ... ಹೀಗೆ ಸೀರೆಯ ವಿಷಯ ಬಂದಾಗ ಅಲ್ಲೊಂದು ಭಾವ ಪ್ರಪಂಚ ತೆರೆದುಕೊಳ್ಳುತ್ತದೆ. ಮನೆಯ ಕಪಾಟಿನಲ್ಲಿ ಎಷ್ಟೇ ಸೀರೆ ಇದ್ದರೂ ಹೊಸತೇನಾದರೂ ಕಂಡಾಕ್ಷಣ ಇದೊಂದು ಇದ್ದರೆ ಚೆನ್ನಾಗಿರುತ್ತಿತ್ತು ಎನ್ನುವುದು ಹೆಣ್ಣು ಮಕ್ಕಳ ಸಹಜವಾದ ಬಯಕೆ. ಸೀರೆ ಹೆಣ್ಣುಮಕ್ಕಳನ್ನು ಇನ್ನಷ್ಟು ಮುದ್ದಾಗಿ ಕಾಣುವಂತೆ ಮಾಡುತ್ತದೆ.

ಈಗ ಮಾರುಕಟ್ಟೆಯಲ್ಲಿ ನಾನಾ ಬಗೆಯ ಸೀರೆಗಳು ಬಂದಿವೆ. ಆದರೆ ಹಿಂದಿನಿಂದಲೂ ಬಂದ ಸೀರೆಗಳು ಮನಸ್ಸನ್ನು ಸೆಳೆಯುವುದರಲ್ಲಿ ಎರಡು ಮಾತಿಲ್ಲ. ಕೆಲವೊಂದು ಸೀರೆಗಳು ತಮ್ಮ ವಿಭಿನ್ನ ವಿನ್ಯಾಸ, ಬಣ್ಣದಿಂದಲೇ ಹೆಚ್ಚು ಪ್ರಖ್ಯಾತಿಯಾಗಿರುತ್ತದೆ. ಮೈಸೂರು ಸಿಲ್ಕ್ ಸೀರೆ, ಬನಾರಸಿ ಸೀರೆ, ಇಳಕಲ್ ಸೀರೆ ಹೀಗೆ ಒಂದೊಂದು ಸೀರೆಗೂ ಒಂದೊಂದು ಇತಿಹಾಸ ಇದೆ. ಮೆತ್ತಗಿದ್ದು, ಜರಿ, ತೆಳು.. ಹೀಗೆ ನಾನಾ ಬಗೆಯ ಸೀರೆಗಳು ಹೆಂಗಳೆಯರ ಮೈಅಪ್ಪುವ ಬಗೆಯೇ ವಿಶೇಷವಾದದ್ದು. ಹಗುರುವಾದ ಸೀರೆ ಇದ್ದರೆ ಸಾಕು, ನೆರಿಗೆ ಚೆನ್ನಾಗಿ ಬಂದರೆ ಆಯ್ತು ಎನ್ನುವ ಕಾಲ ಈಗಿಲ್ಲ. ಯಾವುದೇ ಸೀರೆಯಾದರೂ ಸೈ ಸಿಂಗರಿಸಿಕೊಳ್ಳುವ ಕಲೆಯೊಂದು ನಿಮ್ಮೊಳಗಿದ್ದರೆ ಚೆಂದವಾಗಿ ಕಾಣುವುದರಲ್ಲಿ ಎರಡು ಮಾತಿಲ್ಲ. ಅಂದಹಾಗೆ ಇಲ್ಲಿ ಪ್ರಸಿದ್ಧವಾದ ಪೈಠಣಿ ಸೀರೆಯ ಬಗ್ಗೆ ಹೇಳಲೇ ಬೇಕು. ನೋಡುವುದಕ್ಕೆ ಸುಂದರ ಜತೆಗೆ ವಿನ್ಯಾಸದಲ್ಲೂ ವಿಶಿಷ್ಟವಾದ ಈ ಸೀರೆ ಹೆಂಗಳೆಯರ ಕಣ್ಮನ ಸೆಳೆಯುವುದು ಖಂಡಿತ.

## ಏನಿದು ಪೈಠಣಿ ಸೀರೆ?

ಇದರ ವಿಭಿನ್ನತೆಯಿಂದಲೇ ಪೈಠಣಿ ಹೆಸರುವಾಸಿಯಾಗಿದೆ. ಸುಂದರವಾದ ಸೀರೆಗಳ ಸಾಲಿನಲ್ಲಿ ಈ ಪೈಠಣಿ ಸೀರೆ ಕೂಡ ಅಗ್ರಸ್ಥಾನದಲ್ಲಿದೆ. ತನ್ನ ಸುಂದರವಾದ ಜರಿಯಿಂದಲೇ ಇದು ಎಲ್ಲರ ಕಣ್ಮನ ಸೆಳೆಯುತ್ತದೆ. ವಿಶೇಷವಾಗಿ ಇದನ್ನು ಗುಜರಾತಿ ಹಾಗೂ ಮಹಾರಾಷ್ಟ್ರದ ಕುಟುಂಬಗಳಲ್ಲಿ ಹೆಣ್ಣುಮಕ್ಕಳು ತಮ್ಮ ಮದುವೆ ಹಾಗೂ ಇನ್ನಿತರ ಶುಭ ಸಮಾರಂಭಗಳಲ್ಲಿ ಧರಿಸಲು ಆಯ್ಕೆ ಮಾಡುತ್ತಾರೆ. ಈ ಸೀರೆಗಳನ್ನು ಅತ್ಯುತ್ತಮವಾದ ರೇಷ್ಮೆ ವಸ್ತುಗಳಿಂದ ಮಾಡಲಾಗುತ್ತದೆ. ಇನ್ನು ಈ ಸೀರೆ ಮಹಾರಾಷ್ಟ್ರದ ಸಣ್ಣ ಪಟ್ಟಣವಾದ ಪೈಥಾನ್‌ನಿಂದ ಹುಟ್ಟಿಕೊಂಡಿದೆ. ಇದರ ವಿಶಿಷ್ಟವಾದ ನೇಯ್ಗೆಯ ತಂತ್ರದಿಂದಲೇ ಇದು ಇತರ ಸೀರೆಗಳಿಂದ ವಿಭಿನ್ನ ಎಂದು ಹೇಳಬಹುದು.

ಮಹಾರಾಷ್ಟ್ರದ ಮದುವೆ ಸಮಾರಂಭಗಳಲ್ಲಿ ಈ ಸೀರೆಯದ್ದೇ ಮೇಲುಗೈ. ಮಹಾರಾಷ್ಟ್ರದಲ್ಲಿ ಇದನ್ನು 'ಸೀರೆಗಳ ರಾಣಿ' ಎಂದು ಕರೆಯುತ್ತಾರೆ. ಪೈಠಣಿ ಸೀರೆಗಳು ಮಹಾರಾಷ್ಟ್ರದ ಸಂಸ್ಕೃತಿಯ ಅವಿಭಾಜ್ಯ